**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2434 |
| ಸದಸ್ಯರ ಹೆಸರು | : | ಶ್ರೀ ಸಿ ಎನ್ ಮಂಜೇಗೌಡ |
| ಉತ್ತರಿಸುವ ದಿನಾಂಕ | : | 22/03/2022 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮೈಸೂರು ತಾಲ್ಲೂಕಿನ ಶ್ರೀರಾಂಪುರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಉನ್ನತೀಕರಿಸಿರುವುದು ಯಾವಾಗ; (ಮಾಹಿತಿ ಒದಗಿಸುವುದು) | ಮೈಸೂರು ತಾಲ್ಲೂಕಿನ ಶ್ರೀರಾಂಪುರ ಗ್ರಾಮ ಪಂಚಾಯಿತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ 143 ಎಂಎಲ್ಆರ್ 2020 ದಿನಾಂಕ:26/03/2021 ರನ್ವಯ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಅಧಿಸೂಚನೆಯ ಪ್ರತಿಯನ್ನು ಅನುಬಂಧಿಸಿದೆ. |
| (ಆ) | ಈ ಹಿಂದೆ ಶ್ರೀರಾಂಪುರ ಗ್ರಾಮ ಪಂಚಾಯಿತಿ ಇದ್ದಾಗ ಕೆಲವು ನಿಯಮದಡಿ ನಮೂನೆ-9, 11ಎ, 11ಬಿ ದೃಢೀಕರಣ ದಾಖಲೆ ನೀಡುತ್ತಿದ್ದು, ಪಟ್ಟಣ ಪಂಚಾಯಿತಿ ಆದ ಮೇಲೆ ಯಾವ ದಾಖಲೆಗಳನ್ನು ನೀಡದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಈ ನ್ಯೂನ್ಯತೆಗಳನ್ನು ಸರ್ಕಾರ ಕೂಡಲೇ ಸರಿಪಡಿಸಲು ಕ್ರಮ ತೆಗೆದುಕೊಳ್ಳುವುದೇ; (ಮಾಹಿತಿ ಒದಗಿಸುವುದು) | ನಮೂನೆ-9, 11ಎ, 11ಬಿ ದೃಢೀಕರಣ ಪ್ರಪತ್ರಗಳನ್ನೂ ಒಳಗೊಂಡು ವಿವಿಧ ಆಸ್ತಿಗಳಿಗೆ ಸಂಬಂಧಿಸಿದಂತೆ ಇ-ಆಸ್ತಿ ಮತ್ತು ಇ-ಸ್ವತ್ತು ಖಾತೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಸರ್ಕಾರದಿಂದ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿರುತ್ತದೆ. |
| (ಇ) | 2021-22 ಮತ್ತು 2022-23 ನೇ ಸಾಲಿಗೆ ಯಾವ ಯಾವ ಯೋಜನೆಗಳಡಿಯಲ್ಲಿ ಈ ಪಟ್ಟಣ ಪಂಚಾಯಿತಿಗೆ ಅನುದಾನವನ್ನು ಒದಗಿಸಲಾಗಿದೆ; (ವಿವರ ನೀಡುವುದು) | **ಎಸ್.ಎಫ್.ಸಿ ಮುಕ್ತನಿಧಿ/ ಎಸ್.ಎಫ್.ಸಿ ಕುಡಿಯುವ ನೀರಿನ ಯೋಜನೆ:-**<br>ರಾಜ್ಯದ 2022-23 ನೇ ಸಾಲಿನ ಆಯ-ವ್ಯಯದಲ್ಲಿ ಎಸ್.ಎಫ್.ಸಿ ಮುಕ್ತನಿಧಿ ಮತ್ತು ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ ಯೋಜನೆಯಡಿ ಅನುದಾನವನ್ನು ಕಾಯ್ದಿರಿಸಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ.<br>**ನಗರೋತ್ಥಾನ ಯೋಜನೆ:-**<br>ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಯಡಿ 2021-22 ನೇ ಸಾಲಿನಲ್ಲಿ ಶ್ರಿರಾಂಪುರ ಪಟ್ಟಣ ಪಂಚಾಯಿತಿಗೆ ರೂ.500.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. |

<table>
<tr>
<td></td>
<td></td>
<td>
ಸ್ವಚ್ಛ ಭಾರತ ಯೋಜನೆ:-<br>
ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ ಯೋಜನೆಯಡಿ ಮೈಸೂರು ಜಿಲ್ಲೆಯ ಶ್ರೀರಾಂಪುರ ಪಟ್ಟಣ ಪಂಚಾಯಿತಿಗೆ ಘನತ್ಯಾಜ್ಯ ವಸ್ತು ನಿರ್ವಹಣೆಗೆ ಅವಶ್ಯಕವಿರುವ ವಾಹನಗಳನ್ನು ಖರೀದಿಸಲು ರೂ.20.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>
15ನೇ ಹಣಕಾಸು ಆಯೋಗದ ಅನುದಾನ:<br>
2022-23ನೇ ಸಾಲಿಗೆ 15ನೇ ಹಣಕಾಸು ಆಯೋಗದ ಅನುದಾನದಡಿ 3ನೇ ಎಸ್.ಎಫ್.ಸಿ. ಶಿಫಾರಸ್ಸಿನನ್ವಯ, ಜನಸಂಖ್ಯೆ, ವಿಸ್ತೀರ್ಣ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಜನಸಂಖ್ಯೆ, ಅನಕ್ಷರಸ್ಥರ ಜನಸಂಖ್ಯೆ ಆಧಾರದ ಮೇಲೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಹಂಚಿಕೆಯಾದ ಅನುದಾನವನ್ನು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡುವಾಗ ಶ್ರೀರಾಂಪುರ ಪಟ್ಟಣ ಪಂಚಾಯಿತಿಗೂ ಸಹ ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗುತ್ತದೆ.
</td>
</tr>
<tr>
<td>(ಈ)</td>
<td>ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹೊಸದಾಗಿ ರಚನೆ ಮಾಡಿರುವ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ಸರ್ಕಾರದ ಅನುದಾನವನ್ನು ಹೆಚ್ಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? (ಸ್ಪಷ್ಟ ಮಾಹಿತಿಯೊಂದಿಗೆ ವಿವರ ನೀಡುವುದು)</td>
<td>
ಎಸ್.ಎಫ್.ಸಿ ಮುಕ್ತನಿಧಿ / ಎಸ್.ಎಫ್.ಸಿ ಕುಡಿಯುವ ನೀರಿನ ಯೋಜನೆ:-<br>
ಹೊಸದಾಗಿ ರಚನೆಯಾದ ನಗರ ಸ್ಥಳೀಯ ಸಂಸ್ಥೆಗಳಿಗೆ 2022-23ನೇ ಸಾಲಿನ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಆಯವ್ಯಯದಲ್ಲಿ ಎಸ್.ಎಫ್.ಸಿ. ಮುಕ್ತನಿಧಿ/ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮವಹಿಸಲಾಗಿರುತ್ತದೆ.<br><br>
ನಗರೋತ್ಥಾನ ಯೋಜನೆ:-<br>
ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ಯಡಿ 2021-22ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಹೊಸದಾಗಿ ರಚನೆ ಮಾಡಿರುವ ಪಟ್ಟಣ ಪಂಚಾಯಿತಿಗಳಿಗೆ ಹಂಚಿಕೆ ಮಾಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ:<br><br>
(ರೂ. ಲಕ್ಷಗಳಲ್ಲಿ)
<table>
<tr><th>ಕ್ರ ಸಂ</th><th>ಯೋಜನೆ</th><th>ಜಿಲ್ಲೆ</th><th>ನಗರ ಸ್ಥಳೀಯ ಸಂಸ್ಥೆಯ ಹೆಸರು</th><th>ಹಂಚಿಕೆ</th></tr>
<tr><td>1</td><td rowspan="3">ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)</td><td rowspan="3">ಮೈಸೂರು</td><td>ಬೋಗದಿ ಪಟ್ಟಣ ಪಂಚಾಯಿತಿ</td><td>500.00</td></tr>
<tr><td>2</td><td>ಕಡಕೊಳ ಪಟ್ಟಣ ಪಂಚಾಯಿತಿ</td><td>500.00</td></tr>
<tr><td>3</td><td>ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ</td><td>500.00</td></tr>
</table>
</td>
</tr>
</table>

| | | | | |
|---|---|---|---|---|
| 4 | | | ಸರಗೂರು ಪಟ್ಟಣ ಪಂಚಾಯಿತಿ | 500.00 |
| 5 | | | ಶ್ರೀರಾಂಪುರ ಪಟ್ಟಣ ಪಂಚಾಯಿತಿ | 500.00 |

**ಸ್ವಚ್ಛ ಭಾರತ ಯೋಜನೆ:-**

ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ ಯೋಜನೆಯಡಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಈ ಕೆಳಕಂಡ ಮಾನದಂಡಗಳ ಅನುಸಾರ ಅನುದಾನ ಬಿಡುಗಡೆ ಮಾಡಲಾಗುತ್ತದೆ:

- ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸ್ವಚ್ಛ ಭಾರತ್ ಮಿಷನ್ (ನಗರ) ಪೋರ್ಟಲ್‌ನಲ್ಲಿ ಅನುಮೋದನೆಗೊಂಡ ವೈಯಕ್ತಿಕ ಶೌಚಾಲಯಗಳ ಅರ್ಜಿಗಳ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ;
- ನಗರ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ/ಸಮುದಾಯ ಶೌಚಾಲಯಗಳ ನಿರ್ಮಾಣಕ್ಕೆ ಅಗತ್ಯ ಜಾಗಗಳನ್ನು ಗುರುತಿಸಿ, ಪರಿಶೀಲನಾ ಪಟ್ಟಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿದ ಆಧಾರದ ಮೇಲೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಂತಿಗೆಯನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ.
- ಘನತ್ಯಾಜ್ಯವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ಅನುಮೋದಿತ ವಿಸ್ತೃತಯೋಜನೆ ವರದಿಯ ಬಂಡವಾಳ ಮೊತ್ತದ ಆಧಾರದ ಮೇಲೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಂತಿಗೆಯನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ.

**15ನೇ ಹಣಕಾಸು ಆಯೋಗದ ಅನುದಾನ:-**

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹೊಸದಾಗಿ ರಚನೆ ಮಾಡಿರುವ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳು ಸೇರಿದಂತೆ ರಾಜ್ಯಕ್ಕೆ ಲಭ್ಯವಾಗುವ ಅನುದಾನವನ್ನು ನಿಯಮಾನುಸಾರ ರಾಜ್ಯದ ಆಯವ್ಯಯ ಸಮಯದಲ್ಲಿ ಅಸ್ತಿತ್ವದಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ 3ನೇ ಎಸ್.ಎಫ್.ಸಿ. ಶಿಫಾರಸ್ಸಿನನ್ವಯ, ಜನಸಂಖ್ಯೆ, ವಿಸ್ತೀರ್ಣ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಜನಸಂಖ್ಯೆ, ಅನಕ್ಷರಸ್ಥರ ಜನಸಂಖ್ಯೆ ಆಧಾರದ ಮೇಲೆ ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗುತ್ತದೆ.

ಸಂಖ್ಯೆ: ನಅಇ 28 ಎಲ್‌ಸಿಕ್ಯೂ 2022

(ಎನ್. ನಾಗರಾಜು ಎಂ ಟಿ ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಅನುಬಂಧ – 1

# ಕರ್ನಾಟಕ ರಾಜ್ಯಪತ್ರ


ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೩<br>Part – III | ಬೆಂಗಳೂರು, ಶುಕ್ರವಾರ, ೨೬, ಮಾರ್ಚ್, ೨೦೨೧ (ಚೈತ್ರ, ೦೫, ಶಕವರ್ಷ, ೧೯೪೩)<br>BENGALURU, FRIDAY, 26, MARCH, 2021 (CHAITHRA, 05, SHAKAVARSHA, 1943) | ನಂ. ೩೧೪<br>No. 314 |


## ಕರ್ನಾಟಕ ಸರ್ಕಾರ

**ಸಂಖ್ಯೆ: ನಅಇ 143 ಎಂಎಲ್‌ಆರ್ 2020**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, **ದಿನಾಂಕ:26/03/2021.**

## ಅಧಿಸೂಚನೆ

ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ 9ನೇ ಪ್ರಕರಣದೊಂದಿಗೆ ಓದಿಕೊಂಡಂತೆ 349, 351 ಮತ್ತು 355(ಬಿ)ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಶ್ರೀರಾಂಪುರ ಗ್ರಾಮ ಪಂಚಾಯಿತಿಯ ಶ್ರೀರಾಂಪುರ, ಲಿಂಗಾಬುದಿಪಾಳ್ಯ, ಗುರೂರು, ಕೊಪ್ಪಲೂರು, ಕಳಲವಾಡಿ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು 'ಪರಿವರ್ತನಾ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತನಾ ಪ್ರದೇಶವನ್ನು 'ಶ್ರೀರಾಂಪುರ ಪಟ್ಟಣ ಪಂಚಾಯಿತಿ' ಯ ಪ್ರದೇಶವೆಂದು ನಿರ್ದಿಷ್ಟಪಡಿಸಲು ಪ್ರಸ್ತಾಪಿಸಿ, ಅಧಿಸೂಚನೆ ಸಂಖ್ಯೆ ನಅಇ 143 ಎಂಎಲ್‌ಆರ್ 2020, ದಿನಾಂಕ 23/11/2020 ನ್ನು ದಿನಾಂಕ 24/11/2020 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-3 ರ ಸಂಖ್ಯೆ:597 ರಲ್ಲಿ ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ / ಸಲಹೆ ಸ್ವೀಕೃತವಾಗದಿರುವುದರಿಂದ;

ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ 9ನೇ ಪ್ರಕರಣದೊಂದಿಗೆ ಓದಿಕೊಂಡ 349, 351 ಮತ್ತು 355(ಬಿ) ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಘನತೆವೆತ್ತ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ, 'ಅನುಸೂಚಿ-ಎ' ಮತ್ತು 'ಅನುಸೂಚಿ-ಬಿ'ಯಲ್ಲಿ ನಿರ್ದಿಷ್ಟಪಡಿಸಲಾದ ಪರಿಮಿತಿಯುಳ್ಳ ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಶ್ರೀರಾಂಪುರ ಗ್ರಾಮ ಪಂಚಾಯಿತಿಯ ಶ್ರೀರಾಂಪುರ, ಲಿಂಗಾಬುದಿಪಾಳ್ಯ, ಗುರೂರು, ಕೊಪ್ಪಲೂರು, ಕಳಲವಾಡಿ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು 'ಪರಿವರ್ತನಾ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತನಾ ಪ್ರದೇಶವನ್ನು 'ಶ್ರೀರಾಂಪುರ ಪಟ್ಟಣ ಪಂಚಾಯಿತಿ' ಯ ಪ್ರದೇಶವೆಂದು ಪದನಾಮೀಕರಿಸಿ ಈ ಮೂಲಕ ಉದ್ಘೋಷಿಸಿರುತ್ತಾರೆ-

1. ಅಂಥ ಪ್ರದೇಶದ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಮತ್ತು ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿಲ್ಲದ ಹೊರತು; **18,511**
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋಮೀಟರ್ ಪ್ರದೇಶಕ್ಕೆ ನಾಲ್ಕುನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು; **1,029**
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು; **79%**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

**ಕಡತ ಸಂಖ್ಯೆ: ನಅಇ** 143 **ಎಂಎಲ್ಆರ್** 2020

**ಶೆಡ್ಯೂಲ್-ಎ**

| **ಜಿಲ್ಲೆ** | **ತಾಲೂಕು** | **ಮೇಲ್ದರ್ಜೆಗೇರಿಸಿರುವ ಗ್ರಾಮ ಪಂಚಾಯಿತಿ** | **ಸೇರ್ಪಡೆಗೊಳಿಸಿರುವ ಗ್ರಾಮಗಳು** | **ಒಟ್ಟಾರೆ ಪ್ರದೇಶ** |
|---|---|---|---|---|
| ಮೈಸೂರು | ಮೈಸೂರು | ಶ್ರೀರಾಂಪುರ | ಶ್ರೀರಾಂಪುರ, ಲಿಂಗಾಂಬುದಿಪಾಳ್ಯ, ಗುರೂರು, ಕೊಪ್ಪಲೂರು, ಕಳಲವಾಡಿ | 17.99 ಚದರ ಕಿ.ಮೀ. |

**ಷೆಡ್ಯೂಲ್-ಬಿ:**

**ಉತ್ತರ**: ಲಿಂಗಾಂಬುಧಿ ಸರ್ವೇ ನಂ.1, 4, 5, 6, 7, 10, 12, 23, 24, ಶ್ರೀರಾಂಪುರ ಸರ್ವೇ ನಂ.34, 35, 36, 37, 99, 100, 101, 102

**ಪೂರ್ವ**: ಶ್ರೀರಾಂಪುರ ಸರ್ವೇ ನಂ.102, 103, 117, 117, 121, 122, 145, 146, 147, 181, ಕೊಪ್ಪಲೂರು ಸರ್ವೇ ನಂ.37, 36, 39, 11, 12, 15, 16, 19, 20, 27, 28, 32, 59, ಗುರೂರು ಸರ್ವೇ ನಂ.105, 27, 28, 30, 40, 38, ಕಳಲವಾಡಿ ಸರ್ವೇ ನಂ.43, 46

**ದಕ್ಷಿಣ**: ಕಳಲವಾಡಿ ಸರ್ವೇ ನಂ.46, 47, 48, 133, 135, 136, 138, 139,

**ಪಶ್ಚಿಮ**: ಲಿಂಗಾಂಬುಧಿ ಸರ್ವೇ ನಂ.1, 2, 65, 74, 75, 117, 118, 119, ಶ್ರೀರಾಂಪುರ ಸರ್ವೇ ನಂ.213, 212, 209, 208, ಗುರೂರು ಸರ್ವೇ ನಂ.79, 78, 83, ಕಳಲವಾಡಿ ಸರ್ವೇ ನಂ.22, 20, 18, 17,15, 179, 178, 187, 188, 189, 180

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## GOVERNMENT OF KARNATAKA

No.UDD 143 MLR 2020

Karnataka Government Secretariat
Vikasa Soudha,
Bangalore, **dated 26/03/2021.**

## NOTIFICATION

Whereas the Notification of declaring Grama Panchayat Area of Srirampura, Lingabudipalya, Gururu, Koppaluru and Kalalawadi villages of Srirampura Grama Panchayat of Mysuru Taluk, Mysuru District as a Transitional area as mentioned in the Schedule "A" along with boundaries mentioned in Schedule "B" and further to specify as "Town Panchayat Area" of Srirampura was published as required by Section 9, 349 and 355(B) of the Karnataka Municipalities Act, 1964, vide Government Notification No:UDD 143 MLR 2020, dated 23/11/2020 by providing thirty days time and was published in part-III No.597 Karnataka Gazette Extraordinary, dated 24/11/2020 inviting objections from all persons likely to be affected thereby on or before thirty days from the date of publication of the notification.

And, whereas the Notification was made available to the public on the day of publication;

And, whereas no objection/suggestion was received within the stipulated period;

Now, therefore, in exercise of the powers conferred by Section 9, 349, 351 and 355(B) of the Karnataka Municipalities Act, 1964, the Hon'ble Governor, hereby notify the Grama Panchayat Area of Srirampura, Lingabudipalya, Gururu, Koppaluru and Kalalawadi villages of Srirampura Grama Panchayat of Mysuru Taluk, Mysuru District as a Transitional area as mentioned in Schedule-A along with boundaries mentioned in Schedule-B and further specifying such area to be the "Town Panchayat Area of Srirampura" having regard to:

i. The population of such area is not less than ten thousand and not more than Twenty thousand; **18,511**
ii. The density of population in such area is not less than four hundred inhabitants to one square kilometer of area; **1,029**
iii. The percentage of employment in non-agricultural activities is not less than fifty per cent of the total employment; **79%**

By Order and in the name of the
Governor of Karnataka,

(A. VIJAYA KUMAR)
Under Secretary to Government,
Urban Development Department

**No.UDD 143 MLR 2020**

### Schedule-A

| District | Taluk | Gram Panchyat upgraded | Villages included | Total Area |
|---|---|---|---|---|
| Mysuru | Mysuru | Srirampura | Srirampura, Lingabudipalya, Gururu, Koppaluru, Kalalawadi. | 17.99 Sq. km |

### Schedule-B

| | |
|---|---|
| **North** | Lingabudipalya Village Survey No. 1, 4,5, 6,7,10,12, 23 and 24.<br>Sriramapur Village Survey No. 34.35,36. 37.99, 100, 101 and 102. |
| **West** | Srirampur Survey No. 102, 103, 117, 121, 122, 145, 146, 147 and 181<br>Koppalur Survey No. 37, 36, 39, 11, 12, 15, 16, 19, 20, 27, 28, 32 and 59.<br>Gururu Survey No. 105, 27, 28, 30, 40 and 38.<br>Kalalawadi Survey No. 43 and 46. |
| **South** | Kalalawadi Survey No. 46, 47, 48, 133, 135, 136, 138 and 139. |
| **East** | Lingabudipalya Survey No.1, 2, 65, 74, 75, 117, 118 and 119.<br>Srirampur Survey No. 213, 212, 209 and 208.<br>Gorur Survey No. 79, 78 and 83.<br>Kalalawadi Survey No.22, 20, 18, 17, 15, 179, 178, 187, 188, 189 and 180. |

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು